ಜಾತಿಯ ಜನರೂ ಒಟ್ಟಾಗಿ ನಡೆಯಬೇಕಾಗುವ ಸಂದರ್ಭಗಳು ಬಂದಾಗ, ಈ ಜಾತಿ ವಿಂಗಡಣೆ ಇದೆಯಲ್ಲ ಅದೊಂದು ತೊಡಕಾಗಿ ನಿಲ್ಲುವುದು ಎಲ್ಲರ ಅನುಭವಕ್ಕೆ ಬಂದಿರುವಂಥದೇ ಆಗಿದೆ. ಒಂದು ಜಾತಿ ಹೆಚ್ಚು, ಇನ್ನೊಂದು ಜಾತಿ ಕಮ್ಮಿ, ಆ ಜಾತಿಗೆ ಮೀಸಲಾತಿ ಅವಕಾಶ ಇದೆ ನಮಗೆ ಕಡಿಮೆ ಮೀಸಲಾತಿ ಇದೆ; ಇಲ್ಲಿ ನೋಡಿ ನಮಗೆ ಮೀಸಲಾತಿಯೇ ಇಲ್ಲ 'ನಮಗೂ ಜಾಗ ಕೊಡಿ, ಇಲ್ಲ ಜಾಗ ಬಿಡಿ' ಎಂಬಂಥ ಮಾತುಗಳು ಸಿಡಿದು, ಆಮೇಲೆ ಘರ್ಷಣೆಗೆ ಎಡೆಮಾಡಿಕೊಡುವುದು ಸಾಮಾನ್ಯವಾಗಿ, ಸಮಾಜ ಮತ್ತೊಮ್ಮೆ ತಟಸ್ಥವಾಗುವುದರಲ್ಲಿ ಅನುಮಾನವೇ ಇಲ್ಲ. ಅಂದರೆ, ಯಥಾಸ್ಥಿತಿ ವಾದ. ನಿಂತಲ್ಲೇ ಹೆಜ್ಜೆ ಊರಿ, ಬೇರು ಬಿಟ್ಟು ಜಡವಾಗುವುದು. ನಮ್ಮ ಚಿಲಕಯ್ಯನ ತಕರಾರಿನ ವಾದ ಅಲ್ಲಿಗೆ ಬಂದು ನಿಲ್ಲುತ್ತದೆ. ಇದನ್ನು ಸಮರ್ಥಿಸಲು ಸಾಧ್ಯವೆ? ಆ ಕಾರಣದಿಂದಲೇ ಈ ಜಾತಿ ವ್ಯವಸ್ಥೆಯನ್ನು ನಾನಂತೂ ಸುತರಾಂ ಒಪ್ಪುವುದಿಲ್ಲ, ಈ ವ್ಯವಸ್ಥೆ ಇರುವವರೆಗೆ ನಮ್ಮ ದೇಶ ಎಂದೂ ಪೂರ್ಣ ಪ್ರಮಾಣದಲ್ಲಿ ಅರಳುವುದಿಲ್ಲ; ಅರಳಲಾರದು. ಈ ಕುರಿತು ಪ್ರಾಜ್ಞರಾದ ತಾವು ನನ್ನ ಮತಕ್ಕೆ ತಮ್ಮ ಸಹಮತವನ್ನು ಹಾಕೇಹಾಕುತ್ತೀರಿ ಅಂತ ನಂಬಿಕೆ ನನ್ನದು. ಹಾಗಾಗಿ, ಈ 'ಜಾತಿಜ್ಯೋತಿ' ಅಲ್ಲ 'ಜಾತಿಜ್ವಾಲೆ' ಶಮನವಾಗುವುದು ಮತ್ತು ದಮನವಾಗುವುದು ಎಂದು? ಅಥವಾ ಆಗುವುದೇ ಇಲ್ಲವೆ? ಎಂಬಂಥ ಪ್ರಶ್ನೆಗಳು ಅನೇಕರಿಗೆ ಸಹಜವಾಗಿ ಉದ್ಭವಿಸಿರುತ್ತವೆ. ಇದಕ್ಕೆ ಏನು ಹೇಳುತ್ತೀರಿ? ಎಂಬ ಪ್ರಶ್ನೆಗಳು, ಉಪಪ್ರಶ್ನೆಗಳು ಆಗಿಂದಾಗ್ಗೆ ಏಳುತ್ತಲೇ ಇರುತ್ತವೆ. ಬರೀ ಪ್ರಶ್ನೆಗಳನ್ನೇ ಹಾಕುತ್ತಾ ಕುಳಿತರೆ ಉತ್ತರ ಸಿಗುವುದೆ? ಉತ್ತರ ಎಲ್ಲಿರಬಹುದೆಂಬುದನ್ನು ಹುಡುಕಿ ನೋಡೋಣ ಬನ್ನಿ.

ನಮ್ಮ ದೇಶಕ್ಕೆ ವಿಶಿಷ್ಟವಾದ ಜಾತಿ ವ್ಯವಸ್ಥೆ ಇದೆಯಲ್ಲ—ಇದೇನು ಪ್ರಕೃತಿದತ್ತವಾಗಿ ಅಥವಾ ದೈವಭಕ್ತರು ನಂಬುವ ಹಾಗೆ ದೈವ ನಿರ್ಮಿತವೇನಲ್ಲ. ಕೇವಲ ಮನುಷ್ಯ ನಿರ್ಮಿತವಾದುದು, ಹಾಗಾಗಿಯೇ ಮನುಷ್ಯ ಮಿತವಾದುದು. ಎಷ್ಟೋ ಆಟೊಗಳ ಹಿಂಭಾಗದಲ್ಲಿ 'ಮನುಷ್ಯ ಕೊಟ್ಟದ್ದು ಮನೆತನಕ, ದೇವರು ಕೊಟ್ಟದ್ದು ಕೊನೆತನಕ' ಅಂತ ಹಿನ್ನಾಮಫಲಕ ಹಾಕಿರುವುದಿಲ್ಲವೆ? ಹಾಗೆ, ಈ ಮನುಷ್ಯ ಕೃತಕವಾಗಿ ನಿರ್ಮಿಸಿಕೊಂಡಿರುವ ಜಾತಿ ವ್ಯವಸ್ಥೆಯನ್ನು ಮನುಷ್ಯನೇ ಇಲ್ಲಗೊಳಿಸಬೇಕಿದೆ ಮತ್ತು ಇಲ್ಲಗೊಳಿಸಬಹುದು. ಈ ವ್ಯವಸ್ಥೆ ಒಂದು ಕಾಲದ ತಿಳಿವಳಿಕೆ, ಮತ್ತು ಸಾಮಾಜಿಕ ವ್ಯವಸ್ಥೆ, ಅಷ್ಟೆ. ಸಾರ್ವಕಾಲಿಕವಲ್ಲ. ಹಾಗಾಗಿ, ಅಪ್ಪ ಹಾಕಿದ ಆಲದ ಮರಕ್ಕೆ ನೇಣುಹಾಕಿಕೊಳ್ಳಬೇಕಿಲ್ಲ. ಹೀಗೆ, ಸಮಾಜವನ್ನು ಅವ್ಯವಸ್ಥೆಗೊಳಿಸಿರುವ ಈ ಜಾತಿ ವ್ಯವಸ್ಥೆಯನ್ನು ತೊಡೆದುಹಾಕಬೇಕೆಂದು ನಮ್ಮ ದೇಶದಲ್ಲಿ ಕಾಲಾನುಕಾಲದಿಂದಲೂ ಪ್ರಯತ್ನಗಳು ನಡೆದುಕೊಂಡು ಬಂದಿವೆ. ಈಗಲೂ ಮುಂದುವರಿದಿದೆ. ಆ ಪ್ರಯತ್ನಗಳ ಹಿಂದೆ ದೃಢ ಮನಸ್ಸಿರಬೇಕು ಮತ್ತು ಅಡ್ಡಲಾಗಿ ಬರುವ ಎಲ್ಲ ಅಡೆತಡೆಗಳನ್ನು ಎದುರಿಸುವ ಎದೆಗಾರಿಕೆ ಮತ್ತು ನಿವಾರಿಸುವ ಖಚಿತ ತಿಳಿವಳಿಕೆ ಎರಡೂ ಬೇಕು. ಅಂತಹ ವ್ಯಕ್ತಿಗಳು ನಮ್ಮ ದೇಶದಲ್ಲಿ ಸಾಕಷ್ಟು ಮಂದಿ ಆಗಿಹೋಗಿದ್ದಾರೆ. ಅಂಥವರಲ್ಲಿ ಮೇರು ಸದೃಶವಾಗಿ ಕಾಣುವ ಹನ್ನೆರಡನೆಯ ಶತಮಾನದಲ್ಲಿದ್ದ ನಮ್ಮವನೇ ಆದ ಬಸವಣ್ಣ ಅನ್ನೋದು ನಮ್ಮನಿಮ್ಮೆಲ್ಲರಿಗೆ ಗೊತ್ತಿರುವ ಸಂಗತಿಯೇ ಹೌದಲ್ಲವೆ? ಶ್ರೇಣೀಕೃತ ವ್ಯವಸ್ಥೆಯ ಜಾತಿ ಪದ್ಧತಿಯನ್ನು ಅದರ ಮೂಲದಲ್ಲಿ ಅರ್ಥಮಾಡಿಕೊಂಡು, ಅದರ ವಿನಾಶದ ವಿರುದ್ಧ ಸಂಘಟನಾತ್ಮಕವಾಗಿ ಹೋರಾಡಿದ ನೈಜ ಸಮಾಜಶಾಸ್ತ್ರಜ್ಞ ಬಸವಣ್ಣ ಈ ದೇಶದ ಕ್ರಾಂತಿಕಾರಿ ವ್ಯಕ್ತಿತ್ವದ ಮಹಾನ್ ಮಾನವತಾವಾದಿ. ಕೆಳ ಸಮುದಾಯದ ಗಂಡು ಮತ್ತು ಮೇಲು ಸಮುದಾಯದ ಹೆಣ್ಣು ಇವರಿಬ್ಬರ ಮದುವೆಗೆ ಆ ಕಾಲದಲ್ಲೇ ಬಸವಣ್ಣ ಸಿದ್ಧನಾದ ಅಂದರೆ ಅದೇನು ಸಾಮಾನ್ಯ ಸಂಗತಿಯೇ ಸ್ವಾಮಿ? ಛಲ ಬೇಕು, ಬಲವೂ ಬೇಕು. ಹೃದಯದ ಕೆಚ್ಚು ಕಿಚ್ಚಾಗಿ ಸ್ಫೋಟಿಸಲು ಅಗತ್ಯವಾದ ಮನೋಬಲವನ್ನು ಹೊಂದಿದ್ದ ಬಸವಣ್ಣ ನಮ್ಮ ನಿಮ್ಮ ಹಾಗೆ ಈ ನೆಲದ ಮೇಲೆ ಓಡಾಡಿದ್ದನಲ್ಲ?